# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

## ಬೈರಸಂದ್ರ , ಹೊಸ ವಾರ್ಡ ಸಂಖ್ಯೆ: 196 (ಹಳೆಯ ವಾರ್ಡ ಸಂಖ್ಯೆ: 168 & 169)

**ದಿನಾಂಕ:10.11.2022 ರಂದು ಹೊಸ ವಾರ್ಡ ಸಂಖ್ಯೆ 196 ಬೈರಸಂದ್ರ ವಾರ್ಡನಲ್ಲಿ ನಡೆದ ವಾರ್ಡ ಸಮಿತಿ ಸಭೆ:**

## –: ಸಮಿತಿ ಸಭೆಯ ನಡವಳಿಗಳು :–

ವಾರ್ಡ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ ಸಮಿತಿ ಸದಸ್ಯರು:–

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲು ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಂದ್ರಶೇಖರ್ ವಿ | ಕಾರ್ಯಾದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ರಾಮಚಂದ್ರ .ಸಿ | ಹಿರಿಯ ಆರೋಗ್ಯ–168 ನಿರೀಕ್ಷಕರು, ಬಿ.ಬಿ.ಎಂ.ಪಿ |
| 04 | ಶ್ರೀಮತಿ ಪೂನಂ ಬಿ | ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 05 | ಶ್ರೀ ರಮೇಶ್ ವಿ ಬಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 06 | ಡಾ. ಶರಣಪ್ಪ | MO ಆರೋಗ್ಯ ಇಲಾಖೆ, ಬಿ.ಬಿ.ಎಂ.ಪಿ |
| 07 | ಶ್ರೀ ಗೌತಮ್.ವೈ | SWI ವಾರ್ಡ–168 |
| 08 | ಶ್ರೀ ಕೆ.ಎಲ್ ನಾಗರಾಜು | ಸ.ಅ, BESCOM ಜಯನಗರ |
| 09 | ಶ್ರೀ ವಿಜಯ್ ಹೆಚ್.ಬಿ | ಸ.ಅ, SWD |
| 10 | ಶ್ರೀಮತಿ ಮಂಜುಳ .ಕೆ.ಸಿ | ತೋಟಗಾರಿಕೆ ಇಲಾಖೆ(ದಕ್ಷಿಣ), ಬಿ.ಬಿ.ಎಂ.ಪಿ ಜಯನಗರ |
| 11 | ಶ್ರೀ ಕವಿರಾಜ ಕೆ | ವಾರ್ಡ ಮಾರ್ಷಲ್ 169 |
| 12 | ಶ್ರೀ ನವೀನ್ ಕುಮಾರ್ ಪಿ | ವಾರ್ಡ ಮಾರ್ಷಲ್ 168 |
| 13 | ಶ್ರೀಮತಿ ಡಾ. ಹಲೀಮ್ ಸಾರ | MO-168, ಆರೋಗ್ಯ ಇಲಾಖೆ, ಬಿ.ಬಿ.ಎಂ.ಪಿ |
| 14 | ಕುಮಾರಿ ವಿಶಾಲಕ್ಷಿ ಬಂಡಿ | ಸಹಾಯಕ ಅಭಿಯಂತರರು ವಾರ್ಡ –168 |
| 15 | ವಾರ್ಡ 196 ರ L.I.C ಕಾಲೋನಿ ಸ್ಥಳಿಯ ನಿವಾಸಿಗಳ ಸಂಘ ಹಾಗೂ 4ನೇ ಟಿ ಬ್ಲಾಕ್‌ನ ಸ್ಥಳಿಯ ನಿವಾಸಿಗಳ ಸಂಘ ಮತ್ತು ಸಾರ್ವಜನಿಕರು | |

ವಾರ್ಡ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ ದಿನಾಂಕ 19.10.2022 ರಂದು ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಹಾಗೂ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಮಾಹಿತಿ ಪಡೆದುಕೊಂಡರು.

2. ಹಳೆಯ ವಾರ್ಡ ಸಂಖ್ಯೆ 169 ರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Shoulder drain ಮಾಡಿದ್ದು, ಆದರೆ Shoulder drain ಗಳಿಗೆ Steel Grating ಅಳವಡಿಸಿರುದಿಲ್ಲ ಮತ್ತು ಇನ್ನು ಅನೇಕ ಕಡೆ Shoulder drain ನಿರ್ಮಾಣ ಮಾಡುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWD (South), ಬಿ.ಬಿ.ಎಂ.ಪಿ)**

3. LIC ಕಾಲೋನಿನಲ್ಲಿರುವ 3ನೇ ಅಡ್ಡರಸ್ತೆ ಮತ್ತು 5ನೇ ಅಡ್ಡರಸ್ತೆ ನಲ್ಲಿರುವ ಮರದ ಉದ್ದವಾಗಿರುವ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು. ಸದರಿ ರಸ್ತೆಗಳಲ್ಲಿರುವ ಮರದ ಕೊಂಬೆಗಳನ್ನು ಕತ್ತರಿಸುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

Scanned with CamScanner

4. ಹಳೆಯ ವಾರ್ಡ ಸಂಖ್ಯೆ 168 ರಲ್ಲಿರುವ 28ನೇ ಮುಖ್ಯರಸ್ತೆಯ (ವಿಷ್ಣುವರ್ಧನ್ ಪಾರ್ಕನ) ರಸ್ತೆಯ ಎರಡು ಬದಿ ವಾಹನಗಳನ್ನು ನಿಲ್ಲಿಸುವುದರಿಂದ ವಾಹನ ಒಡಡಲು ತುಂಬಾ ತೊಂದರೆಯಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

5. ಹಳೆಯ ವಾರ್ಡ ಸಂಖ್ಯೆ 169 ರಲ್ಲಿರುವ 10ನೇ ಅಡ್ಡರಸ್ತೆಯಲ್ಲಿ Strom water drain (SWD) ಮೇಲೆ ವಾಹನಗಳನ್ನು ಪಾರ್ಕ ಮಾಡುತ್ತಿದ್ದು. ಇದರಿಂದ ಪಾದಚಾರಿ ಮಾರ್ಗದ ಮೇಲೆ ಸಾರ್ವಜನಿಕರು ಓಡಾಡಲು ತುಂಬಾ ತೊಂದರೆಯಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

6. ಇತ್ತಿಚೀನ ದಿನಗಳಲ್ಲಿ ನಡೆಯುತ್ತಿರುವ ಸೈಬರ್ ಕ್ರೈಮ್ ಪ್ರಕರಣಗಳ ಹೆಚ್ಚಾಗುತ್ತಿದ್ದು. ಇದರ ಬಗ್ಗೆ ಜನ ಜಾಗೃತಿ ಮುಡಿಸಲು ವಾರ್ಡ ಮಟ್ಟದಲ್ಲಿ ಸಭೆಯನ್ನು ಆಯೋಜಿಸಲು ಪೋಲಿಸ್ ಇಲಾಖೆಗೆ ಕೋರಿದರು. **(ಕ್ರಮ: ಜಯನಗರ ಮತ್ತು ತಿಲಕ್‌ನಗರ ಪೋಲಿಸ್ ಠಾಣೆ)**

7. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿ ಹೂಸದಾಗಿ ಮಳೆ ನೀರಿನ ಇಂಗು ಗುಂಡಿ (Rain water Harvesting pits) ಅನ್ನು ನಿರ್ಮಿಸಲು ಸಭೆಯಲ್ಲಿ ಕೋರಿದರು. **(ತೋಟಗಾರಿಕೆ ಇಲಾಖೆ (ದಕ್ಷಿಣ) ಮತ್ತು ಯೋಜನೆ(ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

8. LIC ಕಾಲೋನಿನಲ್ಲಿರುವ 5ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆಯಲ್ಲಿ (ಗಣೇಶ ದೇವಸ್ಥಾನ ಹಿಂಭಾಗ) ಕಸದ ಪ್ರಮಾಣ ಹೆಚ್ಚಾಗುತ್ತಿದ್ದು. ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWM ಜಯನಗರ, ಬಿ.ಬಿ.ಎಂ.ಪಿ)**

9. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿ ಸುತ್ತಲು ಇರುವ ರಸ್ತೆಗಳಲ್ಲಿ ಕಸದ ನಿರ್ವಹಣೆ ಮತ್ತು ಕಸವನ್ನು ಸರಿಯಾಗಿ ಗುಡಿಸದೆ ಇರುವುದರಿಂದ ಕಸದ ಪ್ರಮಾಣ ಹೆಚ್ಚಾಗಿದ್ದು ಇದರ ಬಗ್ಗೆ ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು ಮತ್ತು Dust bins ಗಳಿಂದ ಬರು ಕಸದ ನಿರ್ವಹಣೆ ಸರಿಯಾಗಿ ಮಾಡಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWM ಜಯನಗರ, ಬಿ.ಬಿ.ಎಂ.ಪಿ)**

10. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿರುವ ಸುತ್ತಮುತ್ತಲಿನ ರಸ್ತೆಗಳಲ್ಲಿ ಸರ ಕಳ್ಳತನ ಮತ್ತು ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿದ್ದು, ಇದರ ಬಗ್ಗೆ ಸಂಬಂಧ ಪಟ್ಟ ಇಲಾಖೆಯವರು ಕ್ರಮ ವಹಿಸಲು ಸಭೆಯಲ್ಲಿ ಕೋರಿದರು.**(ಕ್ರಮ: ತಿಲಕ್‌ನಗರ ಪೋಲಿಸ್ ಠಾಣೆ)**

11. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ವಿಷ್ಣುವರ್ಧನ್ ಪಾರ್ಕನಲ್ಲಿರುವ ಬೀದಿ ದೀಪಗಳು ಮತ್ತು Music System ಹಾಳಾಗಿದ್ದು. ಬೀದಿ ದೀಪಗಳು ಇಲ್ಲದೆ ಇರುವುದರಿಂದ ಸಂಜೆ ಮತ್ತು ಮುಂಜಾನೆ ಸಮಯದಲ್ಲಿ ಸಾರ್ವಜನಿಕರಿಗೆ ಓಡಡಲು ತೊಂದರೆಯಾಗುತ್ತಿದ್ದು. ಕೂಡಲೇ ಬೀದಿ ದೀಪಗಳನ್ನು ಅಳವಡಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ವಿದ್ಯುತ್ (ದಕ್ಷಿಣ) ಇಲಾಖೆ, ಜಯನಗರ, ಬಿ.ಬಿ.ಎಂ.ಪಿ)**

12. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ 28ನೇ ಮುಖ್ಯರಸ್ತೆಯಲ್ಲಿರುವ ನಿವೇಶನಗಳಿಂದ ಕಸದ ಸಂಗ್ರಹಣೆಯಾಗುತ್ತಿರುವುದಿಲ್ಲ ಮತ್ತು ಸದರಿ ರಸ್ತೆಯ ಕಸದ ನಿರ್ವಹಣೆ ಮತ್ತು ಮನೆಗಳಿಂದ ಸರಿಯಾದ ಕ್ರಮದಲ್ಲಿ ಕಸ ಸಂಗ್ರಹಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWM ಜಯನಗರ, ಬಿ.ಬಿ.ಎಂ.ಪಿ)**

Scanned with CamScanner

13. ಜಯನಗರ 4ನೇ 'ಟಿ' ಬ್ಲಾಕ್‌ನಲ್ಲಿರುವ ಸಾರ್ವಜನಿಕರು ಕುಳಿತುಕೊಳ್ಳುವ Shelter ಗಳ ಛಾವಣಿವು ಹಾಳಾಗಿದ್ದು ಮಳೆಯ ನೀರಿನಿಂದ ಸೋರುತ್ತಿದ್ದು. ಸದರಿ Shelter ಗಳನ್ನು ದುರಸ್ತಿ ಪಡಿಸುವಂತೆ ಮತ್ತು ಸದರಿ ಪಾರ್ಕನಲ್ಲಿ Dust bins ಅಳವಂಡಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ಯೋಜನೆ (ದಕ್ಷಿಣ), ಜಯನಗರ, ಬಿ.ಬಿ.ಎಂ.ಪಿ)**

14. ವಾರ್ಡ ಸಂಖ್ಯೆ 168ರ ವ್ಯಾಪ್ತಿಯಲ್ಲಿರುವ ಜಯನಗರ 4ನೇ 'ಟಿ' ಬ್ಲಾಕ್‌ನ 32ನೇ 'ಇ' ಅಡ್ಡರಸ್ತೆಯಲ್ಲಿ ವಾರಸುದಾರರಿಲ್ಲದ (ಬಿಡಾಡಿ) ವಾಹನಗಳಿದ್ದು. ಸದರಿ ವಾಹನಗಳನ್ನು ತೆರೆವುಗೊಳ್ಳಿಸುವಂತೆ ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, ಜಯನಗರ ಉಪ-ವಿಭಾಗ ಬಿ.ಬಿ.ಎಂ.ಪಿ & ಕ್ರಮ: ಮೈಕೊ ಲೇಔಟ್ ಸಂಚಾರ ಪೋಲಿಸ್ ಠಾಣೆ)**

**ನಿರ್ಣಯ:** ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ವರದಿ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ ಚಂದ್ರಶೇಖರ್.ವಿ)
ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಮಿತಿ ಸಭೆ
ಹೊಸ ವಾರ್ಡ-196 ಬೈರಸಂದ್ರ (ಹಳೆಯ ವಾರ್ಡ 168&169)

(ಶ್ರೀ ವಾಲು ರಾಥೋಡ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ ಸಭೆ
ಹೊಸ ವಾರ್ಡ-196 ಬೈರಸಂದ್ರ (ಹಳೆಯ ವಾರ್ಡ 168&169)

1. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ವಲಯ ಆಯುಕ್ತರು (ದಕ್ಷಿಣ), ಬಿ.ಬಿ.ಎಂ.ಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಕಡತಕ್ಕೆ.

Scanned with CamScanner